## ಸರಳ ವಿವರಣೆ

‘ಡಾಲರ್ ಎದುರು ರೂಪಾಯಿ ಬೀಳುವುದೇಕೆ?’ (ಫೆ. 06, ಜೆ.ಎನ್. ಜಗನ್ನಾಥ್) ಲೇಖನ ಬಹಳ ಸರಳವಾಗಿ ಡಾಲರ್ ಮತ್ತು ರೂಪಾಯಿ ಮೌಲ್ಯದ ಕುರಿತು ವಿವರಿಸಿದೆ.

—ಆರ್. ಪ್ರಸಾದ್

## ‘ಅರ್ಥ’ಬದ್ಧ

ಡಾಲರ್ ಎದುರು ರೂಪಾಯಿ ಬೀಳುವುದಕ್ಕೆ ಕಾರಣವೇನೆಂದು ವಿವರವಾಗಿ ಹಾಗೂ ಎಲ್ಲರಿಗೂ ತಿಳಿಯುವಂತೆ ವಿವರಿಸಲಾಗಿದೆ.

—ಬಿ.ಕೆ. ಅರಸ್, ಮೈಸೂರು



## ಉತ್ತಮ ಲೇಖನ

ರೂಪಾಯಿ ಮೌಲ್ಯದ ಕುರಿತ ಲೇಖನ ಅದ್ಭುತವಾಗಿದೆ. ಮುಖ್ಯ ವಿಚಾರವನ್ನು ನನ್ನಂತಹ ಸಾಮಾನ್ಯರಿಗೂ ವಿಷದವಾಗಿ ಹಾಗೂ ಸರಳ ಶಬ್ದಗಳಲ್ಲಿ ತಿಳಿಸಿ ಹೇಳುವುದರಲ್ಲಿ ಸಫಲವಾಗಿದೆ.

— ರಾಜು ಮಹಿಷಿ, ಕೋಲ್ಕತ್ತ

## ಸಂಬಂಧದ ಎಳೆಗಳು

‘ಸಂಬಂಧಗಳು’ (ಫೆ. 06, ಸಿ.ಎನ್. ಮುಕ್ತಾ) ಕಥೆ ಬಹಳ ಇಷ್ಟವಾಯಿತು. ಸಂಬಂಧಗಳ ನಡುವಿನ ಬಿರುಕುಗಳು, ಬಿಕ್ಕಟ್ಟುಗಳು ಹಾಗೂ ಅನಿವಾರ್ಯತೆಗಳ



ಎಳೆಗಳನ್ನು ಬಿಡಿಸಿಟ್ಟಿದ್ದಾರೆ. ಮದುವೆ ಕಾರಣವಾಗಿ ರಕ್ತಸಂಬಂಧಗಳಿಂದ ದೂರ ಇರಬೇಕಾಗಿ ಬಂದ ಮಾಧವನೇ ತನ್ನ ಕುಟುಂಬಕ್ಕೆ ನೆರವಾಗಿದ್ದು ಮನಸ್ಸು ಕರಗಿಸಿತು. ಎಷ್ಟೋ ಕುಟುಂಬಗಳಲ್ಲಿ ಈ ರೀತಿ ಇರುತ್ತದೆ.

—ಪ್ರಕಾಶ್, ಮೈಸೂರು

## ಡಾ. ಪೌಲ್ ನೆನಪು




‘ಕುಷ್ಠದ ವಿರುದ್ಧ ಮುಗಿಯದ ಯುದ್ಧ’ (ಫೆ. 06, ನೇಮಿಚಂದ್ರ) ಮುಖಪುಟ ಲೇಖನದಲ್ಲಿ – ಸುರೇಶ್, ಮಂಗಳ ದಂಪತಿ ಕುಷ್ಠರೋಗದ ವಿರುದ್ಧ ಹೋರಾಡಿ ಗೆದ್ದ ಕಥೆ ಸ್ಫೂರ್ತಿದಾಯಕವಾಗಿದೆ. ಈ ಸಂದರ್ಭ ನನ್ನ ಅನುಭವವೊಂದನ್ನು ಹಂಚಿಕೊಳ್ಳುವ ಮನಸ್ಸಾಯಿತು.

ನಾನು ಮಗುವಿದ್ದಾಗಲೇ ಪೋಲಿಯೊ ರೋಗಕ್ಕೆ ತುತ್ತಾಗಿ ಎರಡೂ ಕಾಲುಗಳ ಉಪಯೋಗ ಕಳೆದುಕೊಂಡಿದ್ದೆ. 1959–60ರಲ್ಲಿ, ನನಗೆ 11 ವರ್ಷ ಇದ್ದಾಗ ವೆಲ್ಲೂರಿನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ಹಲವಾರು ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದೆ. ನನ್ನ ವೈದ್ಯರು ಡಾ. ಪೌಲ್ ಬ್ರಾಂಡ್! ಅವರು ಮೂಳೆ ಶಸ್ತ್ರಚಿಕಿತ್ಸಕರು ಮತ್ತು ಕುಷ್ಠರೋಗದ ಬಗ್ಗೆ ಸಂಶೋಧನೆ ನಡೆಸುತ್ತಿದ್ದರು. ಕುಷ್ಠ ಹರಡುವ ರೋಗವಲ್ಲ ಎಂದು ನಿರೂಪಿಸಲು, ಆಸ್ಪತ್ರೆ ಆವರಣದಲ್ಲೇ ಗುಡಿಸಿಲಿನಲ್ಲಿ ಕುಷ್ಠರೋಗಿಗಳ ಜೊತೆಗೇ ವಾಸವಾಗಿದ್ದರು, ರೋಗಿಗಳ ಕೈ ಕಾಲಿನ ಬೆರಳುಗಳು, ಮೂಗು ಇತ್ಯಾದಿಯಲ್ಲಿ ನೋವಿನ ಅರಿವಾಗುವುದಿಲ್ಲವಾದ್ದರಿಂದ ಪೆಟ್ಟಾಗಿಯೋ, ಇಲಿ, ಜಿರಳೆ, ಕೀಟಗಳು ಕಚ್ಚುವುದರಿಂದ ಊನವಾಗುತ್ತದೆಯೇ ಹೊರತು ಬ್ಯಾಕ್ಟೀರಿಯಾದಿಂದಲ್ಲವೆಂದು ಸಾಬೀತುಪಡಿಸಿದರೆಂದು ಸುದ್ದಿಯಾಗಿತ್ತು!

ಚಿಕ್ಕ ಹುಡುಗಿಯಾಗಿದ್ದ ನಾನು ಆಪರೇಷನ್‌ಗೆ ಮೊದಲು ಅವರನ್ನು ನೋಡಲೇಬೇಕು ಎಂದು ಹಟ ಮಾಡಿದ್ದೆ. ಅಲ್ಲಿಯೇ ಇದ್ದ ಬ್ರಾಂಡ್ ಜೋರಾಗಿ ನಗುತ್ತಾ, ನನ್ನ ಕೈ ಹಿಡಿದು ನನ್ನಲ್ಲಿ ಆತ್ಮವಿಶ್ವಾಸ ತುಂಬಿದ್ದು ಇನ್ನೂ ನೆನಪಿದೆ. ಮುಂದೆ ಅವರು ಕುಷ್ಠರೋಗದ ಬಗ್ಗೆ ಸಂಶೋಧನೆ ಮಾಡಿ ಪ್ರಸಿದ್ಧರಾದರು. ಅವರು ಕಂಡುಹಿಡಿದ Tendon Transplant ಚಿಕಿತ್ಸೆಯನ್ನು ಜಗತ್ತಿನೆಲ್ಲೆಡೆ ಅನುಸರಿಸುತ್ತಿದ್ದಾರೆ.

—ಮೀರಾ ವಲ್ಲಭ

## ಮಾನವೀಯತೆಯ ಸ್ಫೂರ್ತಿ

ಲೇಖನ ಹಲವರಿಗೆ ಕಣ್ಣು ತೆರೆಯುವಂತೆ ಮಾಡಿದೆ. ಸುರೇಶ್‌ರವರ ಮಾನವೀಯತೆ ತುಂಬಿದ ಸೇವೆ, ಮಹತ್ತರ ಸಾಧನೆ ನಮ್ಮೆಲ್ಲರಿಗೂ ಸ್ಫೂರ್ತಿ ಮತ್ತು ಹೆಮ್ಮೆಪಡುವಂತಹದು.

—ಬಿ. ಯೋಗನಾಥ್ ಸಿಂಗ್, ಮೈಸೂರು

## ಆಧುನಿಕ ಕಾಲದಲ್ಲೂ ಅಜ್ಞಾನ

ಕುಷ್ಠರೋಗದ ಬಗ್ಗೆ ಈ ಆಧುನಿಕ ಕಾಲದಲ್ಲಿಯೂ ಇರುವ ಅಜ್ಞಾನದ ಬಗ್ಗೆ ಲೇಖಕರು ಬೆಳಕು ಚೆಲ್ಲಿದ್ದಾರೆ. ಪೂರ್ಣ ಗುಣವಾಗುವ ಈ ರೋಗದ ಬಗ್ಗೆ ಈಗಲೂ ಭಯವಿರುವುದು ಸತ್ಯ. ಬಹುತೇಕ ಆರ್ಥಿಕ ಬಲಹೀನರಲ್ಲಿ ಕಾಣುವ ಈ ರೋಗ ಸೋಂಕಿತರನ್ನು ಮತ್ತಷ್ಟು ಅಸ್ಪೃಶ್ಯಕ್ಕೆ ತಳ್ಳುತ್ತದೆ. ಈ ಸವಾಲುಗಳನ್ನು ಎದುರಿಸಿ ನಿಂತು ಗೆದ್ದು ಕುಷ್ಠ ರೋಗಿಗಳ ಭವಿಷ್ಯಕ್ಕಾಗಿ ಶ್ರಮಿಸುತ್ತಿರುವ ಸುರೇಶ್ ಧೋಂಡ್ಗೆ ಹಾಗೂ ಮಂಗಳ ಅಭಿನಂದನಾರ್ಹರು.

—ಜಿ. ಮಣಿಪ್ರಕಾಶ್, ಬೆಂಗಳೂರು

## ನೆಚ್ಚಿನ ಸೆಲೆಬ್ರಿಟಿ

ಫೆ. 06ರ ಇಡೀ ಸಂಚಿಕೆ ವೈವಿಧ್ಯಮಯವಾಗಿತ್ತು. ನಾನು ‘ಸುಧಾ’ ಬಂದ ತಕ್ಷಣ ಓದೋದು ಸೆಲೆಬ್ರಿಟಿ ಅಂಕಣ. ಕೊಂಕಣದ ಅಜ್ಜಿ ಬಗ್ಗೆ ಬಹಳ ಇಷ್ಟವಾಯಿತು. ಅವರ ಸಂತೃಪ್ತ ನುಡಿ ಮನಸ್ಸನ್ನು ಕರಗಿಸುತ್ತೆ. ಪಕ್ಷಿಲೋಕ, ಜೀವವೈವಿಧ್ಯ ಲೇಖನಗಳು ಇಷ್ಟವಾದವು. ಕಾದಂಬರಿ, ಕತೆ, ಜಾತ್ರೆಗಳ ಬಗ್ಗೆ ನಿಮ್ಮೊಡನೆ ಅಂಕಣ ಚೆನ್ನಾಗಿತ್ತು.

—ಸುನಿತಾ ವೆಂಕಟೇಶ್, ದಾವಣಗೆರೆ

## ಸೊಗಸಾದ ನಿರೂಪಣೆ

‘ಸ್ಪೇಡೆಕ್ಸ್: ಅಂತರಿಕ್ಷ ನಿಲ್ದಾಣಕ್ಕೆ ಅಡಿಗಲ್ಲು’ (ಫೆ. 06, ಶಿವಪ್ರಕಾಶ್ ಭೋಗಣ್ಣ) ಬರಹ ಮಾಹಿತಿಪೂರ್ಣವಾಗಿದೆ. ನಿರೂಪಣೆ ಸೊಗಸಾಗಿದೆ. ಉದಾಹರಣೆಗೆ, ಬ್ರಹ್ಮಗಂಟು, ಡೈವೋರ್ಸ್ ಪದಗಳನ್ನು ಉಪಯೋಗಿಸಿ ಸುಲಭವಾಗಿ ಅರ್ಥಮಾಡಿಸಿದ್ದಾರೆ.

—ಸುಮಾವೀಣಾ

## ವಿಪರ್ಯಾಸ ಮತ್ತು ಶೋಚನೀಯ

‘ಕ್ಯಾಲಿಫೋರ್ನಿಯಾ; ಅಮೆರಿಕದ ಲಾಕ್ಷಾಗೃಹ’ (ಜ. 30, ರಹಮತ್ ತರೀಕೆರೆ) ಪ್ರವಾಸ ಚಿಂತನ ಬಹಳ ಚೆನ್ನಾಗಿತ್ತು. ಅಮೆರಿಕ ಎನ್ನುವ ಶ್ರೀಮಂತ ರಾಷ್ಟ್ರದ ಭವ್ಯತೆಯ ಜೊತೆಜೊತೆಯಲ್ಲಿ ಕರಾಳ ರೂಪವನ್ನು ಭೇದಿಸಿದ ಲೇಖನ. ಅಲ್ಲಿನ ಕಪ್ಪು ಜನರ ಪರಿಸ್ಥಿತಿ ಹೀನಾಯವಾಗಿರುವುದನ್ನು ಓದಿ ನಿಜಕ್ಕೂ ಆಶ್ಚರ್ಯವಾಯಿತು. ಜಗತ್ತಿನಾದ್ಯಂತ ಯುದ್ಧ ಮಾಡಿ, ಮಾಡಿಸಿ ಜನರನ್ನು ತಬ್ಬಲಿಗೊಳಿಸಿದ ರಾಷ್ಟ್ರದ ಜನರೇ ತಬ್ಬಲಿಗಳಾಗುತ್ತಿರುವುದು ವಿಪರ್ಯಾಸ ಮತ್ತು ಶೋಚನೀಯವಲ್ಲವೇ?

—ಎ.ಕೆ. ಚಂದ್ರಪ್ಪ, ಶಿವಮೊಗ್ಗ

## ಚಿಂತನೆಗೆ ಹಚ್ಚಿತು

‘ಗಾಂಧಿ’ ದೂರ– ದೂರು’ (ಫೆ. 06, ಚಂಪಕಮಾಲಾ) ವಿಚಾರ ಲಹರಿ ವೈಚಾರಿಕವಾಗಿ ಚಿಂತಿಸುವಂತೆ ಮಾಡಿತು. ಬರಹ ಓದಿದ ನಂತರ ಬಾಪೂಜಿ ಕುರಿತ ಹೆಮ್ಮೆ ಇನ್ನಷ್ಟು ಹೆಚ್ಚಾಯಿತು.

—ಗಾಯತ್ರಿ ವೆಂಕಟೇಶ್, ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in